# ಸತತ ಪರಿಶ್ರಮ, ಉತ್ತಮ ಸಾಧನೆ

## ಕರ್ನಾಟಕ ಬ್ಯಾಂಕ್ ಲಿಮಿಟೆಡ್‌ನ

ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಆಗಿರುವ

**ಶ್ರೀ ಮಹಾಬಲೇಶ್ವರ ಎಂ.ಎಸ್. ರವರು**

ದಿನಾಂಕ 02.09.2021 ರಂದು ನಡೆದ

**ಶೇರುದಾರರ 97ನೇ ವಾರ್ಷಿಕ ಮಹಾಸಭೆಯಲ್ಲಿ** ಮಾಡಿದ ಭಾಷಣದ ಸಾರಾಂಶ



### ಮಾನ್ಯ ಶೇರುದಾರರೇ,

ಕಳೆದ ಹಣಕಾಸು ವರ್ಷ 2020-2021 ರ ನಿಮ್ಮ ಬ್ಯಾಂಕಿನ ಕಾರ್ಯನಿರ್ವಹಣೆಯ ವರದಿಯನ್ನು ಪ್ರಸ್ತುತಪಡಿಸಲು ನಾನು ಸಂತೋಷಪಡುತ್ತೇನೆ.

ಈ ವರ್ಷವೂ ಸಹ ವಿವಿಧ ಸ್ಥಳಗಳಿಂದ ಬ್ಯಾಂಕಿನ ವಾರ್ಷಿಕ ಮಹಾಸಭೆಗೆ ಭಾಗವಹಿಸುತ್ತಿರುವ (ಆನ್‌ಲೈನ್ ಮೂಲಕ) ನಮ್ಮ ಎಲ್ಲಾ ಶೇರುದಾರರಿಗೆ ಧನ್ಯವಾದಗಳು.

ವಿಶ್ವದಾದ್ಯಂತ ಬಾಧಿಸಿದ ಕೋವಿಡ್-19 ಸಾಂಕ್ರಾಮಿಕ ರೋಗವು ಜಾಗತಿಕ ಮತ್ತು ಭಾರತೀಯ ಹಣಕಾಸು ಮಾರುಕಟ್ಟೆಗಳಲ್ಲಿ ಗಣನೀಯ ತೊಂದರೆ ಮತ್ತು ಏರಿಳಿತಗಳನ್ನು ಉಂಟುಮಾಡಿದೆ. ಮೊದಲನೇ ಅಲೆಯಲ್ಲಿ ನಾವು ಯಶಸ್ವಿಯಾಗಿ ಸಾಗಿ ಮುನ್ನಡೆದ ಅನುಭವವು ಎರಡನೇ ಅಲೆಯ ಸವಾಲುಗಳನ್ನು ಎದುರಿಸುವಲ್ಲಿ ಸಾಕಷ್ಟು ಆತ್ಮವಿಶ್ವಾಸವನ್ನು ತುಂಬಿದೆ. ಅಲ್ಲದೆ, ಈ ಸಾಂಕ್ರಾಮಿಕದ ಮುಂದಿನ ಹಂತದ ಅಲೆಗಳು ಯಾವುದಾದರೂ ಇದ್ದರೆ, ಅವುಗಳನ್ನೂ ಯಶಸ್ವಿಯಾಗಿ ದಾಟಿಕೊಂಡು ಮುಂದೆ ಸಾಗುತ್ತೇವೆ ಎನ್ನುವ ವಿಶ್ವಾಸವಿದೆ. ಈ ಬಿಕ್ಕಟ್ಟಿನ ಪರಿಸ್ಥಿತಿಯು ನಮಗೆ ಹೊಸ ಅವಕಾಶಗಳನ್ನು ತೋರಿಸಿಕೊಟ್ಟಿದೆ. ಸೀಮಿತ ಕ್ಷೇತ್ರಗಳಲ್ಲಿ ನಡೆಯುತ್ತಿದ್ದ ಡಿಜಿಟಲ್ ಕ್ರಾಂತಿ, ಈಗ ಬಹುಪಾಲು ಕ್ಷೇತ್ರಗಳಿಗೆ ವಿಸ್ತರಿಸಿದೆ. ಇದು ವ್ಯಾಪಾರ ವಹಿವಾಟಿನ ವಿಧಾನವನ್ನು ಬದಲಿಸಲು ಮತ್ತು ಹೊಸ (New-normal) ಪರಿಸ್ಥಿತಿಗೆ ಹೊಂದಿಕೊಳ್ಳಲು ನಮಗೆ ಕಲಿಸಿತು. ನಿಮ್ಮ ಬ್ಯಾಂಕ್ ಕೂಡ ಈ ಸಾಂಕ್ರಾಮಿಕ ರೋಗವನ್ನು ಎದುರಿಸಿ ವ್ಯವಹಾರವನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸಲು ಹಲವು ವಿನೂತನ ಕ್ರಮಗಳನ್ನು ಕೈಗೊಂಡಿತು. ಕೋವಿಡ್-19ರ ಹಿನ್ನೆಲೆಯಲ್ಲಿ 'ಸಂರಕ್ಷಿಸು, ಕ್ರೋಢೀಕರಿಸು ಮತ್ತು ಶಕ್ತಿಶಾಲಿಯಾಗಿ ಹೊರಹೊಮ್ಮು' ಎಂಬ ವ್ಯವಹಾರದ ಧ್ಯೇಯ ವಾಕ್ಯವನ್ನು ನಾವು ಅಳವಡಿಸಿಕೊಂಡೆವು. ಕೋವಿಡ್-19 ನಂತರದ ಬಿಕ್ಕಟ್ಟು ಇನ್ನೂ ಮುಗಿದಿಲ್ಲವಾದರೂ, ಮುಂದಿನ ದಿನಗಳಲ್ಲಿ ನಿಮ್ಮ ಬ್ಯಾಂಕ್ ಇನ್ನೂ ಪ್ರಬಲವಾಗಿ ಹೊರ ಹೊಮ್ಮುತ್ತದೆ ಎಂದು ನನಗೆ ವಿಶ್ವಾಸವಿದೆ.

### ಜಾಗತಿಕ ಆರ್ಥಿಕತೆ

2021 ರ ಜಾಗತಿಕ ಜಿಡಿಪಿ ಶೇ. 6.3 ರಷ್ಟು ಬೆಳೆಯುವ ನಿರೀಕ್ಷೆಯಿದ್ದು ಅಭಿವೃದ್ಧಿ ಹೊಂದಿದ ದೇಶಗಳ ಜಿಡಿಪಿಯ ಬೆಳವಣಿಗೆಯಲ್ಲೂ ಸಹ ಹೆಚ್ಚಳವಾಗುವ ನಿರೀಕ್ಷೆ ಇದೆ.

### ಭಾರತೀಯ ಆರ್ಥಿಕತೆ

ಜೂನ್ 2021ರ ವಿಶ್ವ ಬ್ಯಾಂಕಿನ ವರದಿಯ ಪ್ರಕಾರ, 2021-22ರ ಆರ್ಥಿಕ ವರ್ಷದಲ್ಲಿ ಭಾರತದ ಆರ್ಥಿಕತೆಯು ಶೇ. 8.3 ರಷ್ಟು ಬೆಳೆಯುವ ನಿರೀಕ್ಷೆಯಿದೆ. ಭಾರತೀಯ ರಿಸರ್ವ್ ಬ್ಯಾಂಕ್ (RBI) 2021-22 (FY22) ಮುನ್ಸೂಚಿಸಲಾದ ಒಟ್ಟು ದೇಶೀಯ ಉತ್ಪನ್ನ (GDP) ಶೇ. 9.5 ಬೆಳವಣಿಗೆಯ ಪ್ರಮಾಣವನ್ನು ಕಾಯ್ದುಕೊಂಡಿದೆ. ಆರ್ಥಿಕತೆಗೆ ಅನುಕೂಲಕರವಾದ ವಾತಾವರಣವನ್ನು ನಿರ್ಮಿಸಲು ಆರ್‌ಬಿಐ ಅನೇಕ ಉಪಕ್ರಮಗಳನ್ನು ಕೈಗೊಂಡಿದೆ. ಸಾಂಕ್ರಾಮಿಕದ ಎರಡನೇ ಅಲೆಯ ಹೊಡೆತದಿಂದ ಪಾರಾಗಿ ದೇಶೀಯ ಆರ್ಥಿಕ ಚಟುವಟಿಕೆಯು ಚೇತರಿಸಿಕೊಳ್ಳಲು ಆರಂಭಿಸಿದೆ ಎಂಬುದನ್ನು ಆರ್‌ಬಿಐ ತಿಳಿಸಿದ್ದು, ಇದೊಂದು ಆಶಾದಾಯಕ ಬೆಳವಣಿಗೆ.

### ಬ್ಯಾಂಕಿಂಗ್ ಉದ್ಯಮ

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಪ್ರಕಾರ, ಭಾರತದ ಬ್ಯಾಂಕಿಂಗ್ ವಲಯವು ಸಾಕಷ್ಟು ಬಂಡವಾಳವನ್ನು ಹೊಂದಿದೆ ಮತ್ತು ಉತ್ತಮವಾಗಿ ನಿಯಂತ್ರಿಸಲ್ಪಡುತ್ತಿದೆ. ಭಾರತದ ಹಣಕಾಸಿನ ಮತ್ತು ಆರ್ಥಿಕ ಪರಿಸ್ಥಿತಿಗಳು ವಿಶ್ವದ ಹಲವು ದೇಶಗಳಿಗಿಂತ ಉತ್ತಮವಾಗಿವೆ. ಕ್ರೆಡಿಟ್, ಮಾರ್ಕೆಟ್ ಮತ್ತು ಲಿಕ್ವಿಡಿಟಿ ರಿಸ್ಕ್ ಅಧ್ಯಯನಗಳ ಪ್ರಕಾರ ಭಾರತೀಯ ಬ್ಯಾಂಕುಗಳು ಯಾವುದೇ ಒತ್ತಡಗಳನ್ನು ತಡೆದುಕೊಳ್ಳುವ ಗುಣ ಹೊಂದಿವೆ ಮತ್ತು ಜಾಗತಿಕ ಕುಸಿತವನ್ನು ಚೆನ್ನಾಗಿ ತಡೆದುಕೊಂಡಿವೆ ಎಂದು ಹೇಳಿದೆ. ಇದಲ್ಲದೆ, ಆರ್‌ಬಿಐ ಪರಿಚಯಿಸಿದ ವಿವಿಧ ಕ್ರಮಗಳಾದ 50,000 ಕೋಟಿ ರೂ. ಗಳ ವಿಶೇಷ ದೀರ್ಘಾವಧಿಯ ರೆಪೊ ಕಾರ್ಯಾಚರಣೆಗಳು (ಎಸ್‌ಎಲ್‌ಟಿಆರ್‌ಒ), ಎಂಎಸ್‌ಎಂಇ ಉದ್ಯಮಿಗಳಿಗೆ, ಸಣ್ಣ ಉದ್ಯಮಗಳಿಗೆ ಸಾಲ ಸೌಲಭ್ಯ, ಕೋವಿಡ್-19 ರ ಬಿಕ್ಕಟ್ಟಿನಿಂದ ಸಂಕಷ್ಟದಲ್ಲಿರುವವರಿಗೆ ನೆರವು ಮುಂತಾದ ಉಪಕ್ರಮಗಳು ಆರ್ಥಿಕತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿವೆ ಮತ್ತು ಈ ಉಪಕ್ರಮಗಳಿಂದಾಗಿ ಭಾರತೀಯ ಬ್ಯಾಂಕಿಂಗ್ ಕ್ಷೇತ್ರವು ಮುಂಬರುವ ದಿನಗಳಲ್ಲಿ ಅಭಿವೃದ್ಧಿ ಪಥದಲ್ಲಿ ಸಾಗಲಿದೆ.

### ನಿಮ್ಮ ಬ್ಯಾಂಕಿನ ಕಾರ್ಯಕ್ಷಮತೆ

ಕೋವಿಡ್-19ರ ಸಂಕಷ್ಟದ ಕಾಲದಲ್ಲಿಯೂ ನಿಮ್ಮ ಬ್ಯಾಂಕ್ ವ್ಯವಹಾರವನ್ನು ಯಶಸ್ವಿಯಾಗಿ ಮುನ್ನಡೆಸಿದೆ ಮತ್ತು ಮೂಲಭೂತ ಅಂಶಗಳನ್ನು ತಳಮಟ್ಟದಿಂದ ಮತ್ತಷ್ಟು ಬಲಪಡಿಸಿದೆ. ನಿಮ್ಮ ಬ್ಯಾಂಕಿನ ಕಾರ್ಯಕ್ಷಮತೆಯು ಒಟ್ಟಾರೆ ತೃಪ್ತಿದಾಯಕವಾಗಿದ್ದು, ಬ್ಯಾಂಕಿನ ಶಕ್ತಿ ಮತ್ತು ಸ್ಥಿತಿಸ್ಥಾಪಕತ್ವಕ್ಕೆ ಸಾಕ್ಷಿಯಾಗಿದೆ.

ಬ್ಯಾಂಕಿನ ಕಾರ್ಯಕ್ಷಮತೆಯ ಸಂಕ್ಷಿಪ್ತ ಮುಖ್ಯಾಂಶಗಳು ಹೀಗಿವೆ:

★ ಪ್ರಚಲಿತ ಸವಾಲುಗಳ ಹೊರತಾಗಿಯೂ, 31.03.2021 ಕ್ಕೆ ಕೊನೆಗೊಂಡ ವರ್ಷದಲ್ಲಿ ಬ್ಯಾಂಕು ಒಟ್ಟಾರೆ ರೂ. 1,27,348.56 ಕೋಟಿಗಳ ವಹಿವಾಟು ನಡೆಸಿದೆ. ಅದರಲ್ಲಿ ರೂ.75,654.86 ಕೋಟಿ ಠೇವಣಿ ಮತ್ತು ರೂ.51,693.70 ಕೋಟಿಗಳ ಮುಂಗಡ ಸೇರಿದೆ.

★ ಬ್ಯಾಂಕ್ ಚಾಲ್ತಿ ಹಾಗೂ ಉಳಿತಾಯ ಖಾತೆಗಳ (ಕಾಸಾ CASA) ಉತ್ತಮ ಬೆಳವಣಿಗೆಯ ಮೇಲೆ ನಿರಂತರವಾಗಿ ಗಮನವನ್ನು ಕೇಂದ್ರೀಕರಿಸಿದೆ. 31.03.2021 ರಂದು ಒಟ್ಟು ಕಾಸಾ (CASA) ಠೇವಣಿಗಳು ರೂ. 23,823 ಕೋಟಿಗಳಷ್ಟಾಗಿದೆ. ಇದು ಒಟ್ಟು ಠೇವಣಿಯ ಶೇ. 31.49ರಷ್ಟಿದ್ದು, ಹಿಂದಿನ ವರ್ಷ ಇದು ಶೇ. 28.91ರಷ್ಟಿತ್ತು.

★ ನಿರ್ವಹಣಾ ಲಾಭವು (Operating Profit) 31.03.2020 ಕ್ಕೆ ಕೊನೆಗೊಂಡ ವರ್ಷದಲ್ಲಿ ರೂ. 1656.77 ಕೋಟಿಗಳು ಆಗಿದ್ದು, 31.03.2021 ರ ವೇಳೆಗೆ ಅದು ರೂ. 1,999.14 ಕೋಟಿಗೆ ಏರಿಕೆಯಾಗಿದ್ದು, ಶೇ. 20.67ರ ಆರೋಗ್ಯಕರ ಬೆಳವಣಿಗೆಯನ್ನು ದಾಖಲಿಸಿದೆ. ನಿವ್ವಳ ಲಾಭವು ರೂ. 431.78 ಕೋಟಿಗಳಿಂದ ಸಾರ್ವಕಾಲಿಕ ಗರಿಷ್ಠವಾದ ರೂ. 482.57 ಕೋಟಿಗಳನ್ನು ದಾಖಲಿಸಿದೆ ಮತ್ತು ಆ ಮೂಲಕ ಶೇ. 11.76 ವಾರ್ಷಿಕ ಬೆಳವಣಿಗೆಯನ್ನು ದಾಖಲಿಸಿದೆ.

★ ಬ್ಯಾಂಕಿನ ಬಂಡವಾಳದ ನಿಧಿಯು ರೂ. 6,789.35 ಕೋಟಿಯಿಂದ ರೂ. 7,387.05 ಕೋಟಿಗೆ ಏರಿಕೆಯಾಗಿದೆ ಮತ್ತು ಬಂಡವಾಳ ಪರ್ಯಾಪ್ತತಾ ಅನುಪಾತ (Captial Adequacy Ratio) ವು ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿದ ಶೇ. 10.875 ರ ಕನಿಷ್ಠ ಮಟ್ಟಕ್ಕಿಂತ ಹೆಚ್ಚಿದ್ದು, ಅದು ಶೇ. 14.85 ರ ಉತ್ತಮ ಮಟ್ಟದಲ್ಲಿದೆ.

★ ಪ್ರೊವಿಷನ್ ಕವರೇಜ್ ಅನುಪಾತವೂ (PCR) ಕೂಡ ಹಣಕಾಸು ವರ್ಷ 2019-2020ರಲ್ಲಿ ಶೇ. 64.70 ಇದ್ದು, ಪ್ರಸ್ತುತ ಹಣಕಾಸು ವರ್ಷ 2020-2021 ರಲ್ಲಿ ಶೇ. 70.05ಕ್ಕೆ ಏರಿಕೆಯಾಗಿ ಉತ್ತಮ ಸಾಧನೆ ತೋರಿದೆ.

★ 31.03.2021 ಕ್ಕೆ ಪ್ರತಿ ಶೇರಿನ ಬುಕ್ ವ್ಯಾಲ್ಯೂ ರೂ. 213.67 ಆಗಿದೆ. ಹಿಂದಿನ ವರ್ಷದಲ್ಲಿ ಇದು ರೂ. 192.06 ಆಗಿತ್ತು.

★ ಡಿಜಿಟಲ್ ಬ್ಯಾಂಕಿಂಗ್ ವಹಿವಾಟುಗಳು ಗಣನೀಯ ಪ್ರಮಾಣದಲ್ಲಿ ಹೆಚ್ಚಿವೆ. ಒಂದು ವರ್ಷದ ಹಿಂದೆ ಇದ್ದ ಶೇ. 83 ಕ್ಕೆ ಹೋಲಿಸಿದರೆ ಮಾರ್ಚ್ 31, 2021 ರ ವೇಳೆಗೆ ಇದು ಶೇ. 90ನ್ನು ಮೀರಿದೆ.

★ ಹಿಂದಿನ ವರ್ಷ ಇದ್ದ ರೂ. 2,799.93 ಕೋಟಿಗಳ ಸ್ಥೂಲ ಅನುತ್ಪಾದಕ ಸ್ವತ್ತುಗಳು (GNPA) ರೂ. 211 ಕೋಟಿಯಷ್ಟು ಕಡಿಮೆಯಾಗಿ ರೂ. 2,588.41 ಕೋಟಿಗೆ ಸುಧಾರಿಸಿವೆ. ಅದೇ ರೀತಿ ನಿವ್ವಳ ಅನುತ್ಪಾದಕ ಸ್ವತ್ತುಗಳು (NNPA) ಕೂಡ ರೂ. 1,755.01 ಕೋಟಿಯಿಂದ ರೂ. 1,642.10 ಕೋಟಿಗೆ ಇಳಿದಿದೆ.

### ಲಾಭಾಂಶ

ಆರ್‌ಬಿಐ ದಿನಾಂಕ 22.04.2021 ರಂದು, ತನ್ನ ಹಿಂದಿನ ಮಾರ್ಗದರ್ಶಿ ಸೂಚನೆಗಳನ್ನು (ಮೇ 4, 2005 ಮತ್ತು ಡಿಸೆಂಬರ್ 04, 2020) ಭಾಗಶಃ ಮಾರ್ಪಾಡು ಮಾಡಿ ಶೇರುದಾರರಿಗೆ ಕೆಲವು ಮಾನದಂಡಗಳಿಗೆ ಒಳಪಟ್ಟು ಲಾಭಾಂಶವನ್ನು ಪಾವತಿಸಲು ಬ್ಯಾಂಕ್‌ಗಳಿಗೆ ಅನುಮತಿ ನೀಡಿದೆ. ಅದರಂತೆ ನಿರ್ದೇಶಕರ ಮಂಡಳಿಯು 31.03.2021 ಕ್ಕೆ ಕೊನೆಗೊಂಡ ವರ್ಷಕ್ಕೆ ಪ್ರತಿ ಈಕ್ವಿಟಿ ಶೇರುಗಳ ಮೇಲೆ ರೂ. 1.80ರಂತೆ (ಅಂದರೆ ಶೇ. 18) ಡಿವಿಡೆಂಡ್ ಅನ್ನು ಪ್ರಸ್ತಾಪಿಸಿದೆ.

### ನಿರ್ದೇಶಕ ಮಂಡಳಿಯ ಸಂಯೋಜನೆ

ನಿಮ್ಮ ಬ್ಯಾಂಕ್ ಕಾಲ ಕಾಲದ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ವೃತ್ತಿಪರವಾಗಿ ಬೆಳೆದ ಬ್ಯಾಂಕ್ ಎಂಬುದು ಹೆಮ್ಮೆಯ ವಿಷಯ. ಇದರಲ್ಲಿ 'ನಿರ್ದೇಶಕ ಮಂಡಳಿ'ಯ ಪಾತ್ರ ಹಿರಿದಾದುದು. ಬ್ಯಾಂಕ್ ಪ್ರಸ್ತುತ ಇಬ್ಬರು ಮಹಿಳಾ ನಿರ್ದೇಶಕರೂ ಸೇರಿದಂತೆ ಒಟ್ಟು 11 ನಿರ್ದೇಶಕರನ್ನು ಹೊಂದಿದೆ. ಅವರಲ್ಲಿ ಎಂಟು ಮಂದಿ ಸ್ವತಂತ್ರ ನಿರ್ದೇಶಕರಿದ್ದು, ಕನಿಷ್ಠ ಅವಶ್ಯಕತೆ ಪ್ರಮಾಣವಾದ 33.33% ಕ್ಕಿಂತ ಹೆಚ್ಚು ಅಂದರೆ 72.72% ರಷ್ಟಿದೆ ಎಂಬುದು ವಿಶೇಷ. 2020-21 ರಲ್ಲಿ ಇಬ್ಬರು ನಿರ್ದೇಶಕರು ಹಾಗೂ ಇನ್ನೊಬ್ಬ ನಿರ್ದೇಶಕರು ಮೇ 2021 ರಲ್ಲಿ ತಮ್ಮ ಪೂರ್ತಿ ಅವಧಿಯನ್ನು ಮುಗಿಸಿ ನಿವೃತ್ತರಾಗಿದ್ದಾರೆ. ನಿರ್ದೇಶಕರ ಮಂಡಳಿಗೆ ಪ್ರತಿಷ್ಠಿತ ಐವರು ಅನುಭವಿ ವ್ಯಕ್ತಿಗಳನ್ನು ಈ ಮಧ್ಯೆ ಹೊಸದಾಗಿ ಹೆಚ್ಚುವರಿ ನಿರ್ದೇಶಕರನ್ನಾಗಿ ಸೇರಿಸಿಕೊಳ್ಳಲಾಗಿದೆ.

### ವ್ಯವಹಾರ ಜಾಲ ವಿಸ್ತರಣೆ

2020-21 ರಲ್ಲಿ ಒಟ್ಟು 16 ಹೊಸ ಶಾಖೆಗಳನ್ನು ತೆರೆಯಲಾಯಿತು ಮತ್ತು 6 ಶಾಖೆಗಳನ್ನು ವಿಲೀನಗೊಳಿಸಲಾಯಿತು. ವ್ಯವಹಾರದ ಅನುಕೂಲಕ್ಕಾಗಿ ಮತ್ತು ಉತ್ತಮ ಪರಿಸರಕ್ಕಾಗಿ 16 ಶಾಖೆಗಳನ್ನು ಸ್ಥಳಾಂತರಿಸಲಾಯಿತು. 31.03.2021 ಕ್ಕೆ ಒಟ್ಟು 858 ಶಾಖೆಗಳು ಹಾಗೂ 1478 ಎಟಿಎಂಗಳು / ಕ್ಯಾಶ್ ರಿಸೈಕ್ಲರ್‌ಗಳು ಕಾರ್ಯ ನಿರ್ವಹಿಸುತ್ತಿವೆ. 'ಚಿಕ್ಕ ಸ್ಥಳಾವಕಾಶ; ಹೆಚ್ಚು ವ್ಯಾಪಾರ' ಎಂಬ ಬ್ಯಾಂಕಿನ ದೃಷ್ಟಿಕೋನಕ್ಕೆ ಅನುಗುಣವಾಗಿ ಶಾಖಾ ಕಛೇರಿಗಳ ಮರುವಿನ್ಯಾಸ ಮತ್ತು ಸುಧಾರೀಕರಣವನ್ನು ಬ್ಯಾಂಕ್ ಕೈಗೊಂಡಿದೆ.

### ವಿತ್ತೀಯ ಸೇರ್ಪಡೆ

ವಿತ್ತೀಯ ಸೇರ್ಪಡೆ ಯೋಜನೆಯ ಮೂಲಕ, ನಿಮ್ಮ ಬ್ಯಾಂಕ್ ಗ್ರಾಮೀಣ ಜನತೆಯ ಸಣ್ಣ ಸಾಲದ ಅಗತ್ಯಗಳನ್ನು ಪೂರೈಸುವುದು, ಅವರಿಗೆ ಪಾವತಿ ವ್ಯವಸ್ಥೆಯ ಬಗ್ಗೆ ತಿಳಿವಳಿಕೆ ನೀಡುವುದು, ಹಣ ರವಾನೆ ಸೌಲಭ್ಯ ಮತ್ತು ಜೀವ / ಆರೋಗ್ಯ ವಿಮಾ ಉತ್ಪನ್ನಗಳನ್ನು ನೀಡುವುದು ಇತ್ಯಾದಿ ಉಪಕ್ರಮಗಳನ್ನು ಜಾರಿಗೊಳಿಸಿದೆ. ಬ್ಯಾಂಕ್ ಗ್ರಾಮೀಣ ಪ್ರದೇಶಗಳಲ್ಲಿ 192 ಶಾಖೆಗಳನ್ನು ಹೊಂದಿದ್ದು, ಹಳ್ಳಿಗಳಲ್ಲಿ ಗ್ರಾಮೀಣ ಗ್ರಾಹಕರಿಗೆ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸುತ್ತಿದೆ ಮತ್ತು ಎಲ್ಲಾ ಗ್ರಾಮೀಣ ಶಾಖೆಗಳು ವಿತ್ತೀಯ ಸಾಕ್ಷರತಾ ಕೇಂದ್ರಗಳಾಗಿ (FLC) ಸಹ ಕಾರ್ಯನಿರ್ವಹಿಸುತ್ತಿವೆ. ಬ್ಯಾಂಕ್ 35 ಅಲ್ಟ್ರಾ ಸ್ಮಾಲ್ ಬ್ರಾಂಚ್ (USB) ಗಳನ್ನು ಹಾಗೂ 120 ಬಿಸಿನೆಸ್ ಕರೆಸ್ಪಾಂಡೆಂಟ್ (BC) ಏಜೆಂಟ್‌ಗಳನ್ನು ಹೊಂದಿದ್ದು, ಅವರು ಕರ್ನಾಟಕ, ಆಂಧ್ರಪ್ರದೇಶ ಮತ್ತು ಛತ್ತೀಸ್‌ಘಢ ರಾಜ್ಯಗಳ ನಿಯೋಜಿತ ಗ್ರಾಮಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ನಿಮ್ಮ ಬ್ಯಾಂಕ್ ಸರಕಾರದ ನೇರ ನಗದು ವರ್ಗಾವಣೆ (ಡಿಬಿಟಿ) ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದೆ. ಕರ್ನಾಟಕ ರಾಜ್ಯದ ಬಿ.ಸಿ. ರೋಡ್, ತಿಪಟೂರು, ಹಾನಗಲ್, ಕುಂದಗೋಳ ಮತ್ತು ಆಲೂರುಗಳಲ್ಲಿ ಒಟ್ಟು ಐದು FLC ಗಳನ್ನು ನಿಮ್ಮ ಬ್ಯಾಂಕ್ ಪ್ರಾಯೋಜಿಸಿದೆ. 2020-21ರ ಆರ್ಥಿಕ ವರ್ಷದಲ್ಲಿ, ಒಟ್ಟು 429 ಹಣಕಾಸು ಸಾಕ್ಷರತಾ ಅಭಿಯಾನಗಳನ್ನು ನಡೆಸಲಾಗಿದೆ ಮತ್ತು 14,159 ಫಲಾನುಭವಿಗಳನ್ನು ತಲುಪಲಾಯಿತು. ಬ್ಯಾಂಕು, ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ (PMJJBY), ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ (PMSBY), ಅಟಲ್ ಪಿಂಚಣಿ ಯೋಜನೆ (APY), ಪ್ರಧಾನಮಂತ್ರಿ ಸ್ವನಿಧಿ (PM SVANidhi), PMJDY ಇತ್ಯಾದಿ ಸಾಮಾಜಿಕ ಸುರಕ್ಷಾ ಯೋಜನೆಗಳನ್ನು ಎಲ್ಲಾ ಶಾಖೆಗಳಲ್ಲೂ ಜಾರಿಗೊಳಿಸಿದೆ ಮತ್ತು 'ರುಪೇ ಡೆಬಿಟ್ ಕಾರ್ಡ್'ಗಳನ್ನು ನೀಡುತ್ತಿದೆ.

### ಆದ್ಯತಾ ವಲಯದ ಮುಂಗಡ

ಬ್ಯಾಂಕಿನ ಆದ್ಯತಾ ವಲಯದ ಮುಂಗಡಗಳು 31 ಮಾರ್ಚ್, 2021 ರ ವೇಳೆಗೆ ರೂ. 28,616.59 ಕೋಟಿಗಳಷ್ಟಿದ್ದು, ಅಡ್ಜಸ್ಟೆಡ್ ನೆಟ್ ಬ್ಯಾಂಕ್ ಕ್ರೆಡಿಟ್‌ನ (ANBC) ಶೇ. 46.58 ರಷ್ಟಿದೆ. ಕೃಷಿ ವಲಯದ ಸಾಲವು ರೂ. 9,071.32 ಕೋಟಿಗಳ ಮಟ್ಟವನ್ನು ತಲುಪಿದ್ದು, ಎಎನ್‌ಬಿಸಿಯ ಶೇ. 14.76 ರಷ್ಟಾಗಿದ್ದು, ದುರ್ಬಲ ವರ್ಗ, ಸಣ್ಣ ಮತ್ತು ಅತಿಸಣ್ಣ ರೈತರನ್ನು ವಿಶೇಷವಾಗಿ ಗಣನೆಗೆ ತೆಗೆದುಕೊಳ್ಳಲಾಗಿದೆ.

### ಅಪಾಯ ನಿರ್ವಹಣೆ ಮತ್ತು ಅನುಪಾಲನಾ ಸಂಸ್ಕೃತಿ

ಬ್ಯಾಂಕ್ ಸುಭದ್ರವಾದ ಅಪಾಯ ನಿರ್ವಹಣಾ (Risk Management) ವ್ಯವಸ್ಥೆ ಮತ್ತು ಅನುಕರಣೀಯ ಅನುಪಾಲನಾ ಸಂಸ್ಕೃತಿ (Compliance Culture) ಯನ್ನು ಹೊಂದಿದೆ. ಸಾಮಾನ್ಯ ವ್ಯವಹಾರದಲ್ಲಿ ಕಂಡುಬರುವ ಪ್ರಮುಖ ಅಪಾಯಗಳಲ್ಲಿ ಕ್ರೆಡಿಟ್ ರಿಸ್ಕ್, ಮಾರ್ಕೆಟ್ ರಿಸ್ಕ್, ಲಿಕ್ವಿಡಿಟಿ ರಿಸ್ಕ್ ಮತ್ತು ಆಪರೇಶನಲ್ ರಿಸ್ಕ್ ಸೇರಿದಂತೆ ಐಟಿ ರಿಸ್ಕ್, ಬಡ್ಡಿದರದ ರಿಸ್ಕ್, ಕಾನ್‌ಸೆಂಟ್ರೇಷನ್ ರಿಸ್ಕ್, ಸ್ಟ್ರಾಟೆಜಿಕ್ ರಿಸ್ಕ್, ರೆಪ್ಯುಟೇಶನ್ ರಿಸ್ಕ್, ಸೈಬರ್ ರಿಸ್ಕ್ ಇತ್ಯಾದಿ ಸೇರಿದೆ. ಆರ್‌ಬಿಐ ಮಾರ್ಗಸೂಚಿಗಳಿಗೆ ಅನುಸಾರವಾಗಿ, ನಿಮ್ಮ ಬ್ಯಾಂಕ್ ತನ್ನ ನೀತಿಗಳು, ಪರಿಕರಗಳು, ತಂತ್ರಗಳು ಮತ್ತು ಇತರ ಮೇಲ್ವಿಚಾರಣಾ ಕಾರ್ಯವಿಧಾನಗಳನ್ನು ಒಳಗೊಂಡಿರುವ ವಿವಿಧ ಅಪಾಯ ನಿರ್ವಹಣಾ ವ್ಯವಸ್ಥೆಗಳನ್ನು ನಿಯಮಿತವಾಗಿ ಬಲಪಡಿಸುತ್ತಿದೆ. ನಿರ್ದೇಶಕ ಮಂಡಳಿಯ ಸಮಿತಿಯಾದ 'ರಿಸ್ಕ್ ಮತ್ತು ಕ್ಯಾಪಿಟಲ್ ಮ್ಯಾನೇಜ್‌ಮೆಂಟ್ ಕಮಿಟಿ' (RCMC)ಯು ಪರಿಣಾಮಕಾರಿ ನಿರ್ವಹಣೆಗಾಗಿ ಕಾಲಕಾಲಕ್ಕೆ ರಿಸ್ಕ್ ಪ್ರೊಫೈಲ್ ಅನ್ನು ಪರಿಶೀಲಿಸುತ್ತದೆ ಹಾಗೂ ನೀತಿಗಳು ಮತ್ತು ಮಾರ್ಗೋಪಾಯಗಳನ್ನು ವಿಶ್ಲೇಷಿಸಿ ಅಭಿವೃದ್ಧಿಪಡಿಸುತ್ತದೆ. ಇದಲ್ಲದೆ, ನಿಮ್ಮ ಬ್ಯಾಂಕ್ ಎಲ್ಲಾ ಅಂಶಗಳಲ್ಲೂ ಅನುಪಾಲನೆ (Compliance) ಸಂಸ್ಕೃತಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತದೆ. ಬ್ಯಾಂಕ್ ತನ್ನ ವ್ಯವಹಾರದಲ್ಲಿ 'ನಿಯಮಗಳಿಗೆ ಬದ್ಧರಾಗಿಯೇ ವ್ಯವಹಾರ (Complaince first-Business next)' ಪರಿಕಲ್ಪನೆಯನ್ನು ಅನುಸರಿಸುತ್ತಿದ್ದು ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿರುವ ಪ್ರತ್ಯೇಕ ಇಲಾಖೆಯು ಅನುಪಾಲನಾ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡುತ್ತಿದೆ ಮತ್ತು ಬ್ಯಾಂಕಿನ ಎಲ್ಲಾ ಪ್ರಾದೇಶಿಕ ಕಛೇರಿಗಳು ಮತ್ತು ಶಾಖೆಗಳಲ್ಲಿ ಕಾಂಪ್ಲಯೆನ್ಸ್ ಅಧಿಕಾರಿಗಳನ್ನು ನೇಮಿಸಲಾಗಿದೆ.

### ಹೂಡಿಕೆದಾರರ ಸಂಪರ್ಕ ಕೇಂದ್ರ (Investor Relation Cell)

ಶೇರುದಾರರೊಂದಿಗೆ ನಿರಂತರವಾಗಿ ತೊಡಗಿಸಿಕೊಳ್ಳಲು ಮತ್ತು ಕಾರ್ಪೊರೇಟ್ ಮಾಹಿತಿಯನ್ನು ಕಾಲ ಕಾಲಕ್ಕೆ ಸ್ವಯಂಪ್ರೇರಿತ ಆಧಾರದ ಮೇಲೆ ತಲುಪಿಸಲು, ಪ್ರತ್ಯೇಕವಾದ 'ಹೂಡಿಕೆದಾರರ ಸಂಪರ್ಕ ಕೇಂದ್ರ'ವು ಪ್ರಧಾನ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. 2020-21ನೇ ವರ್ಷದಲ್ಲಿ, ನಾಲ್ಕು ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಘೋಷಣೆಯಾದ ತಕ್ಷಣವೇ ಪ್ರಮುಖ ಕ್ಷೇತ್ರಗಳಲ್ಲಿ ಬ್ಯಾಂಕಿನ ಕಾರ್ಯಕ್ಷಮತೆಯನ್ನು ವಿವರಿಸುವ ಸಂವಹನಗಳನ್ನು (Concall) ಪ್ರಸಾರ ಮಾಡಲಾಯಿತು ಹಾಗೂ ಶೇರುದಾರರಿಗೆ ಇ-ಮೇಲ್ ಮೂಲಕ ಒಟ್ಟು 5 ಬಾರಿ ಬ್ಯಾಂಕಿನ ಪ್ರಗತಿ ಹಾಗೂ ಪ್ರಸ್ತುತ ವಿಷಯಗಳ ಮಾಹಿತಿ ನೀಡಲಾಯಿತು. ಈ ಎಲ್ಲಾ ಮಾಹಿತಿಗಳನ್ನು ಬ್ಯಾಂಕಿನ ವೆಬ್‌ಸೈಟ್‌ನಲ್ಲೂ ಪ್ರಕಟಿಸಲಾಗಿದೆ.

### ಪ್ರಶಸ್ತಿಗಳು ಮತ್ತು ಪುರಸ್ಕಾರಗಳು

- ಬ್ಯಾಂಕಿನ ಸಿಬ್ಬಂದಿ ತರಬೇತಿ ಕಾಲೇಜಿಗೆ ಪ್ರತಿಷ್ಠಿತ ISO 9001:2015 ಪ್ರಮಾಣೀಕರಣದೊಂದಿಗೆ ಮರು ಮಾನ್ಯತೆ ನೀಡಲಾಗಿದೆ.
- ಅಟಲ್ ಪಿಂಚಣಿ ಯೋಜನೆ (APY) ಯ ಸಮರ್ಥ ನಿರ್ವಹಣೆಗಾಗಿ PFRDA ಯಿಂದ 'ಪವರ್ ಟು ಪರ್ಸಿಸ್ಟ್ (ಸೆಪ್ಟೆಂಬರ್ 2020)' ಎಂಬ ಮೆಚ್ಚುಗೆ ಪ್ರಮಾಣಪತ್ರವನ್ನು ಬ್ಯಾಂಕ್ ಪಡೆದುಕೊಂಡಿದೆ.
- ಹೊಸದಿಲ್ಲಿಯ ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ APY ಅಡಿಯಲ್ಲಿ ಅನುಕರಣೀಯ ಕಾರ್ಯಕ್ಷಮತೆಗಾಗಿ ಪ್ರಶಂಸನಾ ಪತ್ರ.
- 15ನೇ ವರ್ಲ್ಡ್ ಎಚ್‌ಆರ್‌ಡಿ ಕಾಂಗ್ರೆಸ್‌ನ 2020-2021 ಅಧಿವೇಶನದಲ್ಲಿ 'ಕರ್ನಾಟಕ ಬೆಸ್ಟ್ ಎಂಪ್ಲಾಯರ್ ಬ್ರಾಂಡ್ ಅವಾರ್ಡ್ 2020' ಗೌರವಕ್ಕೆ ಬ್ಯಾಂಕ್ ಪಾತ್ರವಾಗಿದೆ.
- ವರ್ಲ್ಡ್ ಎಚ್‌ಆರ್‌ಡಿ ಕಾಂಗ್ರೆಸ್, ಮುಂಬೈ ಇವರಿಂದ ಈ ಕೆಳಗಿನ ಪ್ರತಿಷ್ಠಿತ ಪ್ರಶಸ್ತಿಗಳನ್ನು ನಮ್ಮ ಬ್ಯಾಂಕ್ ಪಡೆದುಕೊಂಡಿದೆ.

  ಎ) ಕೆಲಸ ಮಾಡಲು ಬಯಸುವ ಕನಸಿನ ಸಂಸ್ಥೆ (Dream companies to work for)

  ಬಿ) ಹೊಸತನದ HR ಆಚರಣೆಯನ್ನು ಅನುಸರಿಸುವ ಸಂಸ್ಥೆ (Organisation with innovative HR practices)

ಇದಲ್ಲದೆ, ನಾನು ವಿನೀತನಾಗಿ ನಿವೇದಿಸುವುದೇನೆಂದರೆ, ನಿಮ್ಮ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿಇಒ ಅವರಿಗೆ ಸಮಾಜದ ಪ್ರತಿಷ್ಠಿತ ಸಂಸ್ಥೆಗಳು ಈ ಕೆಳಗಿನ ಗೌರವಗಳನ್ನು ನೀಡಿ ಪುರಸ್ಕರಿಸಿವೆ.

★ ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಬೆಂಗಳೂರು (UASB) ಇದರ 'ಅಲುಮ್ನಿ ಅಸೋಸಿಯೇಷನ್' ನಿಂದ 'ಪ್ರತಿಷ್ಠಿತ ಹಳೆಯ ವಿದ್ಯಾರ್ಥಿ ಪುರಸ್ಕಾರ' (Distinguished Alumni Award).

★ 'ವರ್ಲ್ಡ್ ಲೀಡರ್‌ಶಿಪ್ ಕಾಂಗ್ರೆಸ್ ಆ್ಯಂಡ್ ಅವಾರ್ಡ್' ಸಂಸ್ಥೆ ನೀಡುವ 19ನೇ ವರ್ಷದ ಜಾಗತಿಕ ಬಿಸಿನೆಸ್ ಲೀಡರ್ ಪ್ರಶಸ್ತಿಗಳ ಪೈಕಿ ಪ್ರತಿಷ್ಠಿತ 'ವರ್ಷದ ಸಿಇಒ' (CEO of the year) ಪ್ರಶಸ್ತಿ.

★ ಮಂಗಳೂರಿನ ಎ. ಶಾಮರಾವ್ ಪ್ರತಿಷ್ಠಾನದ ವತಿಯಿಂದ ನೀಡುವ ಪ್ರತಿಷ್ಠಿತ 'ಎ. ಶಾಮರಾವ್ ಸ್ಮಾರಕ ಅತ್ಯುತ್ತಮ ಸಾಧನೆ ಪ್ರಶಸ್ತಿ 2021'.

### KBL-VIKAAS- ಕೆಬಿಎಲ್ ವಿಕಾಸ : ಸಮಗ್ರ ಪರಿವರ್ತನೆಗಾಗಿ ಮಹತ್ವಾಕಾಂಕ್ಷೆಯ ಪಯಣ

ನವೆಂಬರ್ 2017 ರಲ್ಲಿ ಆರಂಭವಾದ ಬ್ಯಾಂಕಿನ ಸಮಗ್ರ ಹಾಗೂ ಪರಿಪೂರ್ಣ ಪರಿವರ್ತನೆಯ ಪಯಣವು ಈಗ ವೇಗ ಪಡೆದುಕೊಂಡಿದೆ. ಇದು ಸಾಲ ಮಂಜೂರಾತಿ ವ್ಯವಸ್ಥೆಯ ಮಾನವ ಸಂಪನ್ಮೂಲ, ಐಟಿ ಕ್ಷೇತ್ರದ ಪರಿವರ್ತನೆ ಹಾಗೂ ಗ್ರಾಹಕರ ಬ್ಯಾಂಕಿಂಗ್ ಅನುಭವಗಳನ್ನು ಉತ್ತಮಗೊಳಿಸುವ ಗುರಿಯನ್ನು ಹೊಂದಿದೆ. ಈ ನಿಟ್ಟಿನಲ್ಲಿ ಬೆಂಗಳೂರಿನಲ್ಲಿ ಅತ್ಯಾಧುನಿಕ ಸೌಲಭ್ಯ ಹೊಂದಿರುವ ಡಿಜಿಟಲ್ ಸೆಂಟರ್ ಆಫ್ ಎಕ್ಸಲೆನ್ಸ್ (DCoE) ಅನ್ನು ಸ್ಥಾಪಿಸಿರುವ ನಿಮ್ಮ ಬ್ಯಾಂಕ್ ಬೆಂಗಳೂರಿನ ಬಸವನಗುಡಿಯಲ್ಲಿ 'ಡಿಜಿ ಬ್ರಾಂಚ್' ಕೂಡ ಪ್ರಾರಂಭಿಸಿದೆ. ಗ್ರಾಹಕರು 'ಡಿಜಿ ಬ್ರಾಂಚ್'ನಲ್ಲಿ ಎಸ್‌ಬಿ ಖಾತೆಯನ್ನು ತೆರೆದು ಕೆಲವೇ ನಿಮಿಷಗಳಲ್ಲಿ ಡೆಬಿಟ್ ಕಾರ್ಡ್ ಅನ್ನು ಪಡೆಯಬಹುದು. 2020-21 ರಲ್ಲಿ, ಬ್ಯಾಂಕ್ 'DhIRA' (Digital Human Interactive Relationship Assistant) ಎಂಬ 'ಚಾಟ್ ಬಾಟ್' ಪರಿಕಲ್ಪನೆಯನ್ನು ಪರಿಚಯಿಸಿ ಬ್ಯಾಂಕಿನ ಉತ್ಪನ್ನಗಳು ಮತ್ತು ಸೇವೆಗಳು, ಮಾಹಿತಿ ಮತ್ತು ಹೊಸ ವ್ಯವಹಾರಗಳಿಗಾಗಿ ಗ್ರಾಹಕರೊಂದಿಗೆ ಸಂವಹನ ಇತ್ಯಾದಿ ನಡೆಸುತ್ತಿದೆ. ಡಿಜಿಟಲೀಕರಣದ ಭಾಗವಾಗಿ, ಬ್ಯಾಂಕ್ ಹಲವಾರು ಡಿಜಿಟಲ್ ಆಧಾರಿತ ಪ್ರೊಡಕ್ಟ್‌ಗಳನ್ನು ಪರಿಚಯಿಸಿದೆ ಮತ್ತು ಬಹುಪಾಲು ರಿಟೇಲ್ ಸಾಲಗಳನ್ನು ಡಿಜಿಟಲ್ ಸಾಲ ಪ್ರಕ್ರಿಯೆಗಳ ಅಡಿಯಲ್ಲಿ ತರಲಾಗಿದೆ ಮತ್ತು In-principle ಮಂಜೂರಾತಿಯನ್ನು ತಕ್ಷಣವೇ ನೀಡಲಾಗುತ್ತದೆ. ಶೇ.90ರಷ್ಟು ಗೃಹ ಸಾಲಗಳು ಮತ್ತು ಕಾರು ಸಾಲಗಳು ಡಿಜಿಟಲ್ ಬ್ಯಾಂಕಿಂಗ್ ಮೂಲಕ ಮಂಜೂರಾಗುತ್ತಲಿವೆ ಮತ್ತು ನಿಮ್ಮ ಬ್ಯಾಂಕ್ ತನ್ನ ಅಂಡರ್‌ರೈಟಿಂಗ್ ಸಾಮರ್ಥ್ಯವನ್ನು TATನಲ್ಲಿ ಗಮನಾರ್ಹ ಸುಧಾರಣೆಯೊಂದಿಗೆ (ಮಂಜೂರಾತಿಯ ಸಮಯವನ್ನು ತಗ್ಗಿಸಲು) ಗಣನೀಯವಾಗಿ ಮೇಲ್ದರ್ಜೆಗೇರಿಸಿದೆ. ಈ ಉಪಕ್ರಮದ ಅಡಿಯಲ್ಲಿ ಎಲ್ಲಾ ಉತ್ಪನ್ನಗಳನ್ನು ತರಲು ಮತ್ತು ಹೆಚ್ಚಿನ ದಕ್ಷತೆಯನ್ನು ಸಾಧಿಸಲು ಬ್ಯಾಂಕು ಪ್ರಯತ್ನಿಸುತ್ತಿದೆ.

ಅಲ್ಲದೆ, ಪರಿವರ್ತನೆಯ ಎರಡನೇ ಹಂತದಲ್ಲಿ 'ಕೆಬಿಎಲ್ ವಿಕಾಸ 2.0' (KBL VIKAAS 2.0) ಮೂಲಕ ನಿಮ್ಮ ಬ್ಯಾಂಕ್ ಸುಧಾರಿತ ಡಿಜಿಟಲ್ ಉಪಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ. ಡಿಜಿಟಲ್ ಟ್ರಾನ್ಸ್‌ಫರ್ಮೇಶನ್‌ನ ಉಪಕ್ರಮವಾಗಿ 'ಕೆಬಿಎಲ್ ನೆಕ್ಸ್ಟ್' (KBL NxT) ಅನ್ನು ಆರಂಭಿಸಿದೆ. ಇದು ನಿಮ್ಮ ಬ್ಯಾಂಕ್ 'ಡಿಜಿಟಲ್ ಬ್ಯಾಂಕ್ ಆಫ್ ಫ್ಯೂಚರ್' ಆಗಿ ಹೊರಹೊಮ್ಮಲು ಸಹಕಾರಿಯಾಗಲಿದೆ. ಗ್ರಾಹಕರ ಡಿಜಿಟಲ್ ಆನ್‌ಬೋರ್ಡಿಂಗ್, ಡಿಜಿ ಬ್ರಾಂಚ್, ವಿಶ್ಲೇಷಣಾತ್ಮಕ ಪರಿಹಾರಗಳು, ಡಿಜಿಟಲ್ ವಿಮೆ, ಹೆಚ್ಚಿದ ಪರ್ಯಾಯ ಸೇವಾ ವಾಹಿನಿಗಳ (ADC) ಅಳವಡಿಕೆ, ಬ್ಯಾಂಕಿನ ಎಲ್ಲಾ ಪ್ರಕ್ರಿಯೆಗಳ ಡಿಜಿಟೈಸೇಶನ್/ಆಟೊಮೇಷನ್, ಐಟಿ ಮೂಲಸೌಕರ್ಯ ವರ್ಧನೆ, ಸೈಬರ್ ಭದ್ರತೆಗಳನ್ನು ಹೊಂದುವುದಕ್ಕಾಗಿ ತಂತ್ರಜ್ಞಾನ ಪರಿಣತ ಉದ್ಯಮದೊಂದಿಗೆ (Fintech) ಒಪ್ಪಂದ ಮಾಡಿಕೊಂಡಿದೆ.

### ಕೆಬಿಎಲ್ ಸರ್ವೀಸಸ್ ಲಿಮಿಟೆಡ್ ಎಂಬ ಅಂಗಸಂಸ್ಥೆಯ ರಚನೆ

ವೆಚ್ಚಗಳನ್ನು ಕಡಿತಗೊಳಿಸಿ ದಕ್ಷತೆಯನ್ನು ಹೆಚ್ಚಿಸುವ ಮತ್ತು ನೇಪಥ್ಯದಲ್ಲಿ (Back Office) ನಲ್ಲಿ ನಡೆಯಬೇಕಾದ ಕೆಲಸಗಳನ್ನು ಸುಗಮಗೊಳಿಸುವ ದೃಷ್ಟಿಯಿಂದ, ನಿಮ್ಮ ಬ್ಯಾಂಕ್ ತನ್ನ ಪ್ರಪ್ರಥಮ ಹಣಕಾಸೇತರ ಅಂಗಸಂಸ್ಥೆ 'ಕೆಬಿಎಲ್ ಸರ್ವೀಸಸ್ ಲಿಮಿಟೆಡ್' ಅನ್ನು ಸ್ಥಾಪಿಸಿದೆ. ಈ ಅಂಗಸಂಸ್ಥೆಯು 30.03.2021ರಿಂದ ಕಾರ್ಯಾರಂಭಿಸಿದೆ. ನಿಗದಿತ ಉದ್ದೇಶಗಳಿಗೆ ಅನುಗುಣವಾಗಿ ಅದರ ಕಾರ್ಯಗಳನ್ನು ತ್ವರಿತಗೊಳಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಈ ಅಂಗಸಂಸ್ಥೆಯ 'ಬಿಸಿನೆಸ್ ಎಸೋಸಿಯೇಟ್ಸ್' ತಂಡವು ಬ್ಯಾಂಕಿಗೆ ಹೊಸ ಗ್ರಾಹಕರನ್ನು (NTB) ಪರಿಚಯಿಸಲು 'ಫೀಟ್ ಆನ್ ಸ್ಟ್ರೀಟ್' ಎಂಬ ಪರಿಕಲ್ಪನೆಯಲ್ಲಿ ಸಹಕರಿಸಲಿದ್ದಾರೆ.

### ಮಾನವ ಸಂಪನ್ಮೂಲ ನಿರ್ವಹಣೆ

ನಮ್ಮ ಸಿಬ್ಬಂದಿಗಳು ಗ್ರಾಹಕ ಸೇವೆಯ ಮುಂದಾಳುಗಳು. ಉತ್ಕೃಷ್ಟತೆಯ ಮಾನದಂಡಗಳನ್ನು ಮರು ವ್ಯಾಖ್ಯಾನಿಸುವಂತೆ ತಮ್ಮ ಜೀವವನ್ನು ಪಣಕ್ಕಿಟ್ಟು ಸಾಂಕ್ರಾಮಿಕದ ಈ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿಯೂ ಅವರು ನಿಷ್ಠೆಯಿಂದ ಕಾರ್ಯನಿರ್ವಹಿಸಿ ಶ್ಲಾಘನೀಯ ಸೇವೆ ಸಲ್ಲಿಸಿದ್ದಾರೆ. ಬ್ಯಾಂಕ್ ತನ್ನ ಸಿಬ್ಬಂದಿಗಳನ್ನು 'ಸಾಮರ್ಥ್ಯ ವೃದ್ಧಿ'ಗಾಗಿ ನಿರಂತರ ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುತ್ತಿದೆ. ELM (ಇ-ಲರ್ನಿಂಗ್ ಮಾಡ್ಯೂಲ್) ಎಂಬ ಡಿಜಿಟಲ್ ಕಲಿಕಾ ವೇದಿಕೆಯನ್ನು ಸಿದ್ಧಪಡಿಸಿದ್ದು, ಇದರಲ್ಲಿ ಉದ್ಯೋಗಿಗಳ ಅನುಕೂಲಕ್ಕಾಗಿ ವಿವಿಧ ವಿಷಯಗಳ ಕುರಿತು ತರಬೇತಿ ಸಾಮಗ್ರಿಗಳನ್ನು ನಿಯಮಿತವಾಗಿ ಒದಗಿಸಲಾಗುತ್ತಿದೆ. ಇದಲ್ಲದೇ, ಬ್ಯಾಂಕಿನ ISO 9001:2015 ಸರ್ಟಿಫೈಡ್ ಸ್ಟಾಫ್ ಟ್ರೈನಿಂಗ್ ಕಾಲೇಜಿನಲ್ಲಿ ತರಬೇತಿ ನೀಡಲಾಗುತ್ತಿದೆ ಮತ್ತು ಇತರ ಪ್ರತಿಷ್ಠಿತ ತರಬೇತಿ ಕೇಂದ್ರಗಳಾದ SBISTC, CAB-RBI, IDBRT, FEDAI, CAFRAL ಇತ್ಯಾದಿಗಳ ಮೂಲಕ 2020-21ರಲ್ಲಿ ಒಟ್ಟು 4,433 ಸಿಬ್ಬಂದಿಗಳು (ಒಟ್ಟು ಸಿಬ್ಬಂದಿಯ ಶೇ. 56.66) ತರಬೇತಿ/ ಕಾರ್ಯಾಗಾರ / ಸೆಮಿನಾರ್‌ಗಳಲ್ಲಿ ಭಾಗವಹಿಸಿದ್ದಾರೆ.

### ಉದ್ಯೋಗಿಗಳಿಗೆ ಕೋವಿಡ್ ಪರಿಹಾರ ಕ್ರಮಗಳು

ನಿಗದಿತ ಮಾರ್ಗಸೂಚಿಗಳಿಗೆ ಅನುಗುಣವಾಗಿ ಮೃತ ಸಿಬ್ಬಂದಿಯ ಕುಟುಂಬದ ಓರ್ವ ಅರ್ಹ ಸದಸ್ಯರಿಗೆ ಸೂಕ್ತ ಅನುಕಂಪದ ನೇಮಕಾತಿ ಮಾತ್ರವಲ್ಲದೆ ಕೋವಿಡ್-19 ಕ್ಕೆ ಬಲಿಯಾದ ನೌಕರರ ವಾರೀಸುದಾರರಿಗೆ (ನಾಮಿನಿ) ರೂ. 20 ಲಕ್ಷಗಳ ವಿಶೇಷ ಕೋವಿಡ್-19 ವಿಮೆಯನ್ನು ಜಾರಿಗೊಳಿಸಿದ್ದೇವೆ. ಬ್ಯಾಂಕ್ ತನ್ನ ಉದ್ಯೋಗಿಗಳು ಮತ್ತು ಅವರ ಕುಟುಂಬದ ಸದಸ್ಯರ ಅನುಕೂಲಕ್ಕಾಗಿ ವಿವಿಧ ಕೇಂದ್ರಗಳಲ್ಲಿ ಲಸಿಕೆ ಶಿಬಿರಗಳನ್ನು ಆಯೋಜಿಸಿದೆ. ಸಿಬ್ಬಂದಿಗಳ ಸುರಕ್ಷತೆಯನ್ನು ಕಾಪಾಡಲು ಕೋವಿಡ್-19 ಸುರಕ್ಷತಾ ಕ್ರಮಗಳಾದ ಸ್ಯಾನಿಟೈಸರ್‌ಗಳು, ಮಾಸ್ಕ್‌ಗಳು ಮತ್ತು ಥರ್ಮಲ್ ಸ್ಕ್ರೀನಿಂಗ್, ವರ್ಕ್ ಫ್ರಂ ಹೋಮ್ (ಮನೆಯಿಂದ ಕೆಲಸ ಮಾಡುವುದು), ಸೆಬ್ಯಾಟಿಕಲ್ ರಜೆ, ಇತ್ಯಾದಿಗಳನ್ನು ಪರಿಚಯಿಸಿದೆ.

### ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (CSR)

ನಿಮ್ಮ ಬ್ಯಾಂಕ್ ಸಿಎಸ್‌ಆರ್ ಕಾರ್ಯಕ್ರಮದ ಅಡಿಯಲ್ಲಿ ಶಿಕ್ಷಣ, ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ ಯೋಜನೆಗಳು, ಪರಂಪರೆಯ ಸಂರಕ್ಷಣೆ, ಕೆರೆಗಳ ಪುನರುಜ್ಜೀವನ, ಹಸಿರು ಉಪಕ್ರಮಗಳು, ಜೀವನೋಪಾಯ ವೃದ್ಧಿ, ಗ್ರಾಮೀಣ ಸರಕಾರಿ ಶಾಲೆಗಳಿಗೆ ಮೂಲಸೌಕರ್ಯ, ಹೀಗೆ ವಿವಿಧ ಚಟುವಟಿಕೆಗಳ ಮೂಲಕ ಸಮಾಜದೊಂದಿಗೆ ಸಕ್ರಿಯ ಸಂಬಂಧವನ್ನು ಹೊಂದಿದೆ. ಹಲವಾರು ವರ್ಷಗಳಿಂದ ಸಿಎಸ್‌ಆರ್ ಅಡಿಯಲ್ಲಿ ನಿಮ್ಮ ಬ್ಯಾಂಕಿನ ಕೊಡುಗೆಗಳು ಸಮಾಜದ ವಿವಿಧ ವಿಭಾಗಗಳಲ್ಲಿ ಸಕಾರಾತ್ಮಕ ಪ್ರಭಾವವನ್ನು ಉಂಟು ಮಾಡಿದೆ. ಇದಲ್ಲದೆ, ಕೋವಿಡ್-19 ಸಂಬಂಧಿತ ಸವಾಲಿನ ಸಮಯದಲ್ಲಿ, ನಿಮ್ಮ ಬ್ಯಾಂಕ್ ಡಿಜಿಟಲ್ ಪಲ್ಸ್ ಆಕ್ಸಿಮೀಟರ್, ಲೈಫ್ ಸಪೋರ್ಟ್ ಆಂಬ್ಯುಲೆನ್ಸ್, ಪಿಪಿಇ ಕಿಟ್‌ಗಳು, ಜೀವರಕ್ಷಕ ವೆಂಟಿಲೇಟರ್‌ಗಳು, ಕಾರ್ಡಿಯಾಕ್ ಮಾನಿಟರ್‌ಗಳನ್ನು ಪೂರೈಸುವ ಮೂಲಕ ಆರೋಗ್ಯವ್ಯವಸ್ಥೆಯ ಸಬಲೀಕರಣಕ್ಕೆ ಕೊಡುಗೆ ನೀಡಿದೆ. 2020-21 ರಲ್ಲಿ ನಿಮ್ಮ ಬ್ಯಾಂಕ್ ತನ್ನ ಸಿಎಸ್‌ಆರ್ ಚಟುವಟಿಕೆಗಳಿಗಾಗಿ ಒಟ್ಟಾರೆ ರೂ. 960 ಲಕ್ಷಗಳ ಬಜೆಟ್ ನಿಗದಿಪಡಿಸಿತ್ತು. ಅದನ್ನು ಮೀರಿ 185 ಯೋಜನೆಗಳಿಗೆ ರೂ. 979.04 ಲಕ್ಷ ಮೊತ್ತವನ್ನು ಮಂಜೂರು ಮಾಡಿದೆ. ನಿರ್ದೇಶಕ ಮಂಡಳಿಯ ಸಮಿತಿಯಾದ ''ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಸಮಿತಿಯು'' ನಿಮ್ಮ ಬ್ಯಾಂಕಿನ ಸಿಎಸ್‌ಆರ್ ಚಟುವಟಿಕೆಗಳ ಒಟ್ಟಾರೆ ನಿರ್ವಹಣೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದೆ.

### ಸ್ಥಾಪಕರ ಸಂಸ್ಮರಣೆ

ಬ್ಯಾಂಕಿನ ಸ್ಥಾಪಕ ಪಿತಾಮಹರಿಗೆ ಗೌರವ ಸಲ್ಲಿಸಲು ಬ್ಯಾಂಕ್ ಪ್ರತಿ ವರ್ಷ ಫೆಬ್ರವರಿ 18 ರಂದು ಸಂಸ್ಥಾಪಕರ ದಿನಾಚರಣೆಯನ್ನು ಆಯೋಜಿಸುತ್ತಿದೆ. ಈ ವರ್ಷವೂ 18.02.2021 ರಂದು ಬ್ಯಾಂಕ್ ತನ್ನ ಸಂಸ್ಥಾಪಕರ ದಿನವನ್ನು ಆಚರಿಸಿದೆ. ಕೋವಿಡ್-19 ನಿಯಮಗಳಿಗೆ ಅನುಗುಣವಾಗಿ ಈ ಕಾರ್ಯಕ್ರಮವನ್ನು ನಡೆಸಲಾಯಿತು. ಖ್ಯಾತ ವಿದ್ವಾಂಸ, ಭಾಷಣಕಾರರಾದ ಡಾ.ಗುರುರಾಜ ಕರಜಗಿ ಅವರು ಈ ವರ್ಷದ ಸಂಸ್ಥಾಪಕರ ದಿನದ ಉಪನ್ಯಾಸ ನೀಡಿದರು ಮತ್ತು ಇದೊಂದು ಉತ್ತಮ ಕಾರ್ಯಕ್ರಮವಾಗಿ ಮೂಡಿಬಂತು.

### ಶತಮಾನೋತ್ಸವ ವರ್ಷ 2023-2024

ನಿಮ್ಮ ಬ್ಯಾಂಕ್ 18.02.2024 ರಂದು ಸಮಾಜಕ್ಕೆ ತನ್ನ 100 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿ ತನ್ನ ಎರಡನೇ ಶತಮಾನದತ್ತ ಮುನ್ನಡೆಯಲಿದೆ. ಈ ಹಿನ್ನೆಲೆಯಲ್ಲಿ ನಾವು 18.02.2023 ರಿಂದ 18.02.2024 ರವರೆಗೆ ಬ್ಯಾಂಕಿನ ಶತಮಾನೋತ್ಸವದ ಆಚರಣೆಗೆ ಯೋಜಿಸುತ್ತಿದ್ದೇವೆ. ಮಾತ್ರವಲ್ಲ, ಹೊಸ ಮತ್ತು ದೀರ್ಘಾವಧಿಯ ಉಪಕ್ರಮಗಳ ಮೂಲಕ ಬ್ಯಾಂಕಿನ ಎರಡನೇ ಶತಮಾನಕ್ಕೆ ಬಲವಾದ ಅಡಿಪಾಯ ಹಾಕಲಿದ್ದೇವೆ. ನಿಮ್ಮ ಬ್ಯಾಂಕ್ ಈ ವಿಶೇಷ ವರ್ಷದ ಸವಿನೆನಪಿಗಾಗಿ 'ಶತಮಾನೋತ್ಸವ ಭವನ', 'ಸ್ಮರಣ ಸಂಚಿಕೆ', 'KBL NxT' ಇತ್ಯಾದಿ ಉಪಕ್ರಮಗಳನ್ನು ಹಮ್ಮಿಕೊಂಡಿದೆ ಎಂಬುದು ಹೆಮ್ಮೆಯ ವಿಚಾರ.

### ಕೃತಜ್ಞತಾಪೂರ್ವಕ ಸ್ಮರಣೆಗಳು

ಬ್ಯಾಂಕ್ ಅನ್ನು ಮುನ್ನಡೆಸುವಲ್ಲಿ ಕಾರ್ಪೊರೇಟ್ ಆಡಳಿತ ಮತ್ತು ವೃತ್ತಿಪರತೆಯ ಉನ್ನತ ಗುಣಮಟ್ಟವನ್ನು ಕಾಯ್ದುಕೊಳ್ಳಲು ಪ್ರಬುದ್ಧ ಸಲಹೆ ಮತ್ತು ಮಾರ್ಗದರ್ಶನ ನೀಡಿದ ನಮ್ಮ ಗೌರವಾನ್ವಿತ ಅಧ್ಯಕ್ಷರಾದ ಶ್ರೀ ಪಿ.ಜಯರಾಮ ಭಟ್ ಮತ್ತು ನಿರ್ದೇಶಕರ ಮಂಡಳಿಗೆ, ಭಾರತೀಯ ರಿಸರ್ವ್ ಬ್ಯಾಂಕ್, ಭಾರತೀಯ ಬ್ಯಾಂಕುಗಳ ಸಂಘ, ಸೆಬಿ, ಸ್ಟಾಕ್ ಎಕ್ಸ್‌ಚೇಂಜ್‌ಗಳು, ಐಆರ್‌ಡಿಎಐ ಮತ್ತು ಇತರ ನಿಯಂತ್ರಣ ಶಾಸನಬದ್ಧ ಸಂಸ್ಥೆಗಳು, ವಿವಿಧ ರಾಜ್ಯ ಸರಕಾರಗಳ ನಿರಂತರ ಮಾರ್ಗದರ್ಶನ ಮತ್ತು ಬೆಂಬಲಕ್ಕೆ, ಅನೇಕ ಸವಾಲುಗಳ ನಡುವೆಯೂ ತಮ್ಮ ಅತ್ಯುತ್ತಮ ಹಾಗೂ ದಣಿವರಿಯದ ಪ್ರಯತ್ನಗಳಿಗಾಗಿ ಹಿರಿಯ ಅಧಿಕಾರಿಗಳ ತಂಡ ಮತ್ತು ಎಲ್ಲಾ ಸಿಬ್ಬಂದಿಗಳಿಗೆ, AIKBEA ಮತ್ತು KBOO ಸಂಘಟನೆಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಮತ್ತು ಪದಾಧಿಕಾರಿಗಳಿಗೆ, ಬ್ಯಾಂಕಿನ ಬಗ್ಗೆ ಅಚಲ ನಂಬಿಕೆ ಮತ್ತು ಅಮೂಲ್ಯವಾದ ಪ್ರೋತ್ಸಾಹವನ್ನು ನೀಡುತ್ತಿರುವ ಸರ್ವ ಶೇರುದಾರರಿಗೆ ಹಾಗೂ ನಮ್ಮ ಎಲ್ಲ ಗೌರವಾನ್ವಿತ ಗ್ರಾಹಕರು ಹಾಗೂ ಹಿತೈಷಿಗಳಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

### ಮುನ್ನೋಟ

2020-21ರಲ್ಲಿ ಕಠಿಣ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ, ಇದೀಗ ನಾವು ಆಶಾವಾದ ಮತ್ತು ಉತ್ಸಾಹದಿಂದ ಮುನ್ನಡೆಯುತ್ತಿದ್ದೇವೆ. ನಮ್ಮ ಗಮನವು ಪ್ರಸ್ತುತ ಆರ್ಥಿಕ ವರ್ಷವನ್ನು ನಮ್ಮ ಬ್ಯಾಂಕಿನ ''ಶ್ರೇಷ್ಠತೆಯ ವರ್ಷ''ವನ್ನಾಗಿ ಮಾಡುವುದರಲ್ಲಿದೆ. ಮುಂಬರುವ ವರ್ಷಗಳಲ್ಲಿ 'ಕೆಬಿಎಲ್ ತಂಡ'ವು ನಿಮ್ಮ ಬ್ಯಾಂಕ್ ಅನ್ನು ಸಮಾನ ಗುಂಪಿನ (Peer Group) ಮೊದಲ ಮೂರು ಸ್ಥಾನಗಳಲ್ಲೊಂದರಲ್ಲಿ ನೋಡಲು ಶ್ರಮಿಸುತ್ತದೆ. ಅದಕ್ಕಾಗಿ ಈ ಕೆಳಗಿನ ಅಂಶಗಳ ಮೇಲೆ ನಾವು ವಿಶೇಷ ಗಮನ ನೀಡಲಿದ್ದೇವೆ.

ಎ) ಆರೋಗ್ಯಕರ, ಸುಸ್ಥಿರ ಮತ್ತು ಲಾಭದಾಯಕ ವ್ಯವಹಾರ.

ಬಿ) ಮುಂಗಡಗಳನ್ನು ಒತ್ತಡ ಮುಕ್ತಗೊಳಿಸಲು ಮತ್ತು ''ಸ್ಲಿಪ್ಪೇಜ್ ರೇಶಿಯೋ''ವನ್ನು ನಿಯಂತ್ರಿಸಲು ದಕ್ಷ ಸಂಗ್ರಹಣಾ ಕಾರ್ಯವಿಧಾನ.

ಸಿ) ಅನುತ್ಪಾದಕ ಆಸ್ತಿಗಳ ಸಮಸ್ಯೆಯ ಪರಿಹಾರಕ್ಕಾಗಿ (ಎನ್‌ಪಿಎ ರೆಸಲ್ಯೂಶನ್) ನಮ್ಮ ಉತ್ತಮ ಪ್ರಯತ್ನಗಳನ್ನು ಮುಂದುವರಿಸಲು ಮತ್ತು ತಾಂತ್ರಿಕವಾಗಿ ಮನ್ನಾ ಮಾಡಲಾದ (ರೈಟ್ ಆಫ್) ಖಾತೆಗಳಿಂದ ಹಣ ವಸೂಲಿ ಮಾಡಲು ವಿಶೇಷ ಗಮನ.

ಡಿ) CASA ಮತ್ತು ಕಡಿಮೆ ವೆಚ್ಚದ RTD-Retail Term Deposit (ಠೇವಣಿ) ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸುವುದು.

ಇ) ಥರ್ಡ್ ಪಾರ್ಟಿ ಪ್ರಾಡಕ್ಟ್ (TPP) ಸೇರಿದಂತೆ ಗ್ರಾಹಕ ಕೇಂದ್ರಿತ ಉಪಕ್ರಮಗಳ, ಶುಲ್ಕದ ಆದಾಯದ ಹರಿವನ್ನು ವಿಸ್ತರಿಸಲು ಆದ್ಯತೆ.

ಎಫ್) 'ಕೆಬಿಎಲ್ ಸರ್ವೀಸಸ್ ಲಿಮಿಟೆಡ್' ಮೂಲಕ ವ್ಯವಹಾರದ ದಕ್ಷತೆ ಹಾಗೂ ಲಾಭಾದಾಯಕತೆಯನ್ನು ಹೆಚ್ಚಿಸುವುದು.

ಜಿ) ಭವಿಷ್ಯಕ್ಕೆ ಪೂರಕವಾದ ಸಿಬ್ಬಂದಿ ಕಾರ್ಯಪಡೆ ರಚಿಸುವುದು.

ಎಚ್) ಅನುಪಾಲನಾ ಸಂಸ್ಕೃತಿಯನ್ನು ಇನ್ನಷ್ಟು ಜಾಗೃತಗೊಳಿಸುವ ಮೂಲಕ ಬ್ಯಾಂಕಿನ ನಿಯಂತ್ರಣ ಕಾರ್ಯಕ್ಷಮತೆಯನ್ನು ಬಲಗೊಳಿಸುವುದು.

ಐ) PCR, CRAR, NIM, ROA, ROE, ವೆಚ್ಚ ಮತ್ತು ಆದಾಯದ ಅನುಪಾತ ಮುಂತಾದ ಮೂಲಭೂತ ಅಂಶಗಳನ್ನು ಮತ್ತಷ್ಟು ಬಲಪಡಿಸುವುದು.

ಜೆ) ಪಾಲುದಾರರ (stake holders) ಮೌಲ್ಯವನ್ನು ಹೆಚ್ಚಿಸಲು ಶ್ರಮವಹಿಸುವುದು.

ಕೆ) 'ಭವಿಷ್ಯದ ಡಿಜಿಟಲ್ ಬ್ಯಾಂಕ್' ಆಗಿ ಹೊರಹೊಮ್ಮಲು "KBL NxT" ಪರಿಕಲ್ಪನೆಯ ಮೂಲಕ ಐಟಿ/ಡಿಜಿಟಲ್/ಭದ್ರತಾ ವಿಶೇಷತೆಗಳನ್ನು ಮತ್ತಷ್ಟು ಬಲಪಡಿಸುವುದು.

ಇದಲ್ಲದೆ, ನಿಮ್ಮ ಬ್ಯಾಂಕ್ ಅನ್ನು ಇತ್ತೀಚೆಗೆ ಆರ್‌ಬಿಐನಿಂದ ಸರ್ಕಾರಿ ವ್ಯವಹಾರ ನಡೆಸಲು 'ಏಜೆನ್ಸಿ ಬ್ಯಾಂಕ್' ಎಂದು ಪರಿಗಣಿಸಲಾಗಿದೆ ಎಂದು ತಿಳಿಸಲು ನನಗೆ ಸಂತೋಷವೆನಿಸುತ್ತದೆ. ಇದರಿಂದ ಮುಂಬರುವ ವರ್ಷಗಳಲ್ಲಿ ಬ್ಯಾಂಕ್ ತನ್ನ ಉಳಿತಾಯ ಹಾಗೂ ಚಾಲ್ತಿ ಖಾತೆಗಳನ್ನು (ಕಾಸಾ-CASA) ಗಣನೀಯವಾಗಿ ಹೆಚ್ಚಿಸಲು ಸಾಧ್ಯವಾಗುತ್ತದೆ ಹಾಗೂ 'ಏಜೆನ್ಸಿ ಬ್ಯಾಂಕ್' ವ್ಯವಹಾರದಲ್ಲೂ ತಂತ್ರಜ್ಞಾನ ಆಧಾರಿತ ಸೇವೆಗಳನ್ನು ಕೇಂದ್ರ ಹಾಗೂ ರಾಜ್ಯ ಸರಕಾರದ ವಿಭಾಗಗಳಿಗೆ ನೀಡಿ ಶುಲ್ಕ ಸಂಗ್ರಹಣೆಯ ಮೂಲಕ ಉತ್ತಮ ಆದಾಯವನ್ನು ಗಳಿಸುವ ನಿರೀಕ್ಷೆಯಿದೆ.

ಬ್ಯಾಂಕ್ ಮತ್ತು ಅದರ ಗ್ರಾಹಕರ ನಡುವಿನ ಪರಸ್ಪರ ನಂಬಿಕೆಯಿಂದ ಮತ್ತು ಶೇರುದಾರರ ದೃಢ ಬೆಂಬಲದೊಂದಿಗೆ ನಿಮ್ಮ ಬ್ಯಾಂಕ್ 97ಕ್ಕೂ ಹೆಚ್ಚು ವರ್ಷಗಳಿಂದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತ ಬಂದಿದೆ ಮತ್ತು ಇದು ಇನ್ನಷ್ಟು ವಿಸ್ತಾರಗೊಳ್ಳಲಿದೆ ಎಂಬ ತುಂಬು ಭರವಸೆ ನನಗಿದೆ. ನಮ್ಮ ವ್ಯವಹಾರ ಮುನ್ನೋಟವು ಸಕಾರಾತ್ಮಕವಾಗಿದ್ದು, ಹಲವಾರು ಅವಕಾಶಗಳ ಬಾಗಿಲು ತೆರೆದಿದೆ ಎಂಬುದು ವಾಸ್ತವ. ಒಟ್ಟಾಗಿ, ನಾವು ಸವಾಲುಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸುತ್ತ 'ಕೆಬಿಎಲ್' ಅನ್ನು ಸುದೃಢವಾದ 'ಭವಿಷ್ಯದ ಡಿಜಿಟಲ್ ಬ್ಯಾಂಕ್' ಆಗಿ ಪರಿವರ್ತಿಸಲು ಶ್ರಮಿಸೋಣ.

(ಟಿಪ್ಪಣಿ : ಇದು ವಾರ್ಷಿಕ ಮಹಾಸಭೆಯ ನಡಾವಳಿಯ ಅಧಿಕೃತ ದಾಖಲೆ ಅಲ್ಲ)

Follow us : / KarnatakaBank

**ಕರ್ನಾಟಕ ಬ್ಯಾಂಕ್ ಲಿ.**

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.